**All India Radio: Bangalore**
**National Bulletin In Kannada**
**02.09.2026 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಐಎಂಎಫ್ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾತುಕತೆ

೨. ಇಂಧನ ಕ್ಷೇತ್ರದಲ್ಲಿ ಸ್ವಾವಲಂಬನೆ ಇಂದಿನ ತುರ್ತು ಅಗತ್ಯ - ಕೇಂದ್ರ ಸಚಿವ ಡಾ. ಜಿತೇಂದ್ರ ಸಿಂಗ್ ಅಭಿಮತ

೩. ಅಯೋಧ್ಯೆ ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಥಮ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನಿವೃತ್ತ ಏರ್ ಮಾರ್ಷಲ್ ಜಿತೇಂದ್ರ ಮಿಶ್ರಾ ನೇಮಕ

೪. ಚೀನಾ ಓಪನ್ ಬ್ಯಾಡ್ಮಿಂಟನ್: ಎರಡನೇ ಸುತ್ತಿಗೆ ಕಿದಂಬಿ ಶ್ರೀಕಾಂತ್, ತನ್ವಿ ಶರ್ಮಾ ಮುನ್ನಡೆ

---

ಅಮೆರಿಕದ ಆಶ್ವಿಲ್ಲೆಯಲ್ಲಿ ನಡೆದ ಜಿ-೨೦ ಹಣಕಾಸು ಸಚಿವರು ಮತ್ತು ಕೇಂದ್ರ ಬ್ಯಾಂಕ್ ಗವರ್ನರ್‌ಗಳ ಸಭೆಯ ನೇಪಥ್ಯದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಂತಾರಾಷ್ಟ್ರೀಯ ಹಣಕಾಸು ನಿಧಿ-ಐಎಂಎಫ್ ವ್ಯವಸ್ಥಾಪಕ ನಿರ್ದೇಶಕಿ ಕ್ರಿಸ್ಟಲಿನಾ ಜಾರ್ಜಿವಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಜಾಗತಿಕ ಆರ್ಥಿಕ ದೃಷ್ಟಿಕೋನ ಮತ್ತು ಭಾರತದ ವಿಕಸಿತ ಬೆಳವಣಿಗೆಯ ಪಥದ ಬಗ್ಗೆ ಉಭಯ ನಾಯಕರು ಚರ್ಚಿಸಿದರು. ವಿಶ್ಲೇಷಣಾತ್ಮಕ ಸಾಮರ್ಥ್ಯಗಳನ್ನು ಬಲಪಡಿಸುವಲ್ಲಿ, ಉತ್ತಮ ಸ್ಥೂಲ ಆರ್ಥಿಕ ನೀತಿಗಳನ್ನು ಬೆಂಬಲಿಸುವಲ್ಲಿ ಮತ್ತು ಜಾಗತಿಕ ಆರ್ಥಿಕ ಸ್ಥಿತಿಸ್ಥಾಪಕತ್ವಕ್ಕೆ ಕೊಡುಗೆ ನೀಡುವಲ್ಲಿ ಭಾರತ-ಐಎಂಎಫ್ ನಿರಂತರ ತೊಡಗಿಸಿಕೊಳ್ಳುವಿಕೆಯ ಮಹತ್ವವನ್ನು ಇಬ್ಬರೂ ನಾಯಕರು ಒತ್ತಿ ಹೇಳಿದರು. ಇದೇ ವೇಳೆ ಭಾರತದ ಬಲವಾದ ಆರ್ಥಿಕ ಕಾರ್ಯಕ್ಷಮತೆಯನ್ನು ಕ್ರಿಸ್ಟಲಿನಾ ಶ್ಲಾಘಿಸಿದರು.

---

ನವದೆಹಲಿಯಲ್ಲಿ ಇಂದು ನಡೆದ ಜಲಶಕ್ತಿ ಸಚಿವಾಲಯದ ಇಲಾಖಾ ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು. ಎರಡು ದಿನಗಳ ಇಲಾಖಾ ಶೃಂಗಸಭೆಯು, ಜಲ ಮೂಲಸೌಕರ್ಯ ಯೋಜನೆಗಳ ಸಕಾಲಿಕ ಅನುಷ್ಠಾನ, ಜಲ ಸಂಚಯ್ ಜನ್ ಭಾಗೀದಾರಿ - ಮಳೆ ನೀರು ಸಂಗ್ರಹ, ಕುಡಿಯುವ ನೀರಿನ ಮೂಲ ಸುಸ್ಥಿರತೆ ಮತ್ತು ಜಲ ಜೀವನ್ ಮಿಷನ್ ೨.೦ ಸೇರಿದಂತೆ ನಾಲ್ಕು ಪ್ರಮುಖ ಕ್ಷೇತ್ರಗಳ ಮೇಲೆ ಕೇಂದ್ರೀಕರಿಸಿತ್ತು. ಈ ಉಪಕ್ರಮವು ನಿರ್ಣಾಯಕ ವಲಯ ಆದ್ಯತೆಗಳ ಕುರಿತು ಜಂಟಿಯಾಗಿ ಚರ್ಚಿಸಲು ಮತ್ತು ಅನುಷ್ಠಾನ ವೇಗಗೊಳಿಸಲು ರಚನಾತ್ಮಕ ವೇದಿಕೆಯನ್ನು ಒದಗಿಸಿತು.

---

ಹಿಂದೂ ಮಹಾಸಾಗರ ಪ್ರದೇಶದಲ್ಲಿ ಭಾರತದ 'ವಿಷನ್ ಮಹಾಸಾಗರ' ಮುನ್ನಡೆಸುವಲ್ಲಿ ಸೀಶೆಲ್ಸ್ ಪ್ರಮುಖ ಪಾಲುದಾರ ರಾಷ್ಟ್ರವಾಗಿದೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

ನವದೆಹಲಿಯಲ್ಲಿ ಸೀಶೆಲ್ಸ್ ಅಸೆಂಬ್ಲಿಯ ಸ್ಪೀಕರ್ ಅಜರೆಲ್ ಅರ್ನೆಸ್ತಾ ಅವರೊಂದಿಗಿನ ಭೇಟಿಯ ಸಂದರ್ಭದಲ್ಲಿ ಓಂ ಬಿರ್ಲಾ ಈ ವಿಷಯ ತಿಳಿಸಿದರು.

ಡಿಜಿಟಲ್ ಸಂಸತ್, ಕೃತಕ ಬುದ್ಧಿಮತ್ತೆ ಮತ್ತು ತಂತ್ರಜ್ಞಾನ, ಆರೋಗ್ಯ ರಕ್ಷಣೆ, ಮೂಲಸೌಕರ್ಯ ಮತ್ತು ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತ-ಸೀಶೆಲ್ಸ್ ನಡುವೆ ಪರಸ್ಪರ ಸಹಕಾರ ಬಲವರ್ಧನೆ ನಿಟ್ಟಿನಲ್ಲಿ ಉಭಯ ನಾಯಕರು ಚರ್ಚಿಸಿದರು.

---

ಪರಿಸರ ಸಂರಕ್ಷಣೆಯಲ್ಲಿ ಸಾಮರಸ್ಯ ಮತ್ತು ಮಾನವ-ಪ್ರಕೃತಿ ಸಹಬಾಳ್ವೆಗೆ ಆದ್ಯತೆ ನೀಡಬೇಕು ಎಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ್ ಹೇಳಿದ್ದಾರೆ.

ನವದೆಹಲಿಯಲ್ಲಿ ಹುಲಿ ಆವಾಸ ಪ್ರದೇಶಗಳ ಸಂರಕ್ಷಣೆ, ಜೈವಿಕ ಆರ್ಥಿಕತೆ ಮತ್ತು ಪರಿಸರ ಪ್ರವಾಸೋದ್ಯಮದ ಮೂಲಕ ಜೀವನೋಪಾಯ ಹಾಗೂ ಆದಾಯ ಹೆಚ್ಚಿಸುವ ಕುರಿತು ಎರಡು ದಿನಗಳ ಅಂತಾರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಹುಲಿಗಳ ಉಳಿವು ಅರಣ್ಯಗಳ ಆರೋಗ್ಯ, ವನ್ಯಜೀವಿ ಸಂಚಾರ ಮಾರ್ಗಗಳು ಹಾಗೂ ಸ್ಥಳೀಯ ಸಮುದಾಯಗಳ ಕಲ್ಯಾಣದೊಂದಿಗೆ ನೇರವಾಗಿ ಸಂಬಂಧಿಸಿದೆ ಎಂದು ಅವರು ತಿಳಿಸಿದರು.

---

ಇಂಧನ ಸುರಕ್ಷತೆಯು ರಾಷ್ಟ್ರೀಯ ಭದ್ರತೆ, ತಂತ್ರಜ್ಞಾನದ ಸ್ವಾಯತ್ತತೆ ಮತ್ತು ಆರ್ಥಿಕ ಸಬಲತೆಯೊಂದಿಗೆ ನೇರ ನಂಟು ಹೊಂದಿದ್ದು, ಇವೆರಡೂ ಒಂದಕ್ಕೊಂದು ಬೇರ್ಪಡಿಸಲಾಗದ ಅಂಶಗಳಾಗಿವೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಪ್ರತಿಪಾದಿಸಿದ್ದಾರೆ.

ನವದೆಹಲಿಯಲ್ಲಿ ‘ಪಿಎಚ್‌ಡಿ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ’ ಆಯೋಜಿಸಿದ್ದ ’೮ನೇ ಅಂತಾರಾಷ್ಟ್ರೀಯ ಹವಾಮಾನ ಶೃಂಗಸಭೆ ೨೦೨೮’ ರಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂಧನ ಕ್ಷೇತ್ರದಲ್ಲಿ ಭಾರತವು ಸ್ವಾವಲಂಬನೆ, ಕೈಗೆಟುಕುವ ವೆಚ್ಚ ಮತ್ತು ಅತ್ಯಾಧುನಿಕ ಸ್ವದೇಶಿ ತಂತ್ರಜ್ಞಾನವನ್ನು ಮೈಗೂಡಿಸಿಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

---

ಅಯೋಧ್ಯೆಯ ಶ್ರೀ ರಾಮಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪ್ರಥಮ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ನಿವೃತ್ತ ಏರ್ ಮಾರ್ಷಲ್ ಜಿತೇಂದ್ರ ಮಿಶ್ರಾ ಅವರನ್ನು ನೇಮಕ ಮಾಡಲಾಗಿದೆ.

ಟ್ರಸ್ಟ್‌ನ ಆಡಳಿತ ಪ್ರಕ್ರಿಯೆಗಳನ್ನು ಬಲಪಡಿಸುವ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸುವ ಆಡಳಿತಾತ್ಮಕ ಸುಧಾರಣೆಗಳ ಭಾಗವಾಗಿ ಈ ನೇಮಕಾತಿ ಮಾಡಲಾಗಿದೆ.

ಟ್ರಸ್ಟ್‌ನ ಇತಿಹಾಸದಲ್ಲೇ ಪೂರ್ಣಾವಧಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯೊಬ್ಬರನ್ನು ನೇಮಕ ಮಾಡಿರುವುದು ಇದೇ ಮೊದಲ ಬಾರಿಯಾಗಿದ್ದು, ಇದು ಸಂಸ್ಥೆಯ ಆಡಳಿತದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ.

---

ಕೇಂದ್ರ ಸರ್ಕಾರ, ೨೦೨೪ ರ ಟೆನ್ಜಿಂಗ್ ನಾರ್ಗೆ ರಾಷ್ಟ್ರೀಯ ಸಾಹಸ ಪ್ರಶಸ್ತಿಗಳನ್ನು ಘೋಷಿಸಿದೆ.

ಭೂ ಸಾಹಸ ವಿಭಾಗದಲ್ಲಿ ಬಲ್ಜೀತ್ ಕೌರ್ ಮತ್ತು ಸ್ಕಲ್ಜಾಂಗ್ ರಿಗ್ಜಿನ್, ಜಲ ಸಾಹಸ ವಿಭಾಗದಲ್ಲಿ ರಿಮೋ ಸಹಾ ಮತ್ತು ಜೀವಮಾನ ಸಾಧನೆ ವಿಭಾಗದಲ್ಲಿ ಶಿವ ಪ್ರಸಾದ್ ಚಮೋಲಿ ಪ್ರಶಸ್ತಿ ಪುರಸ್ಕೃತರು.

ಪ್ರಶಸ್ತಿ ಪುರಸ್ಕೃತರಿಗೆ ತಲಾ ೧೫ ಲಕ್ಷ ರೂಪಾಯಿಗಳ ನಗದು ಮತ್ತು ಪ್ರಮಾಣಪತ್ರ ಪ್ರದಾನ ಮಾಡಲಾಗುತ್ತದೆ.

---

ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಮಧ್ಯಪ್ರದೇಶದ ಶಿವಪುರಿಯ ಕಾಕ್ರ್ವಾಯಾ ಪ್ರದೇಶದಲ್ಲಿ ಇಂದು ದೇಶದ ಏಳನೇ ಅಂಚೆ ತರಬೇತಿ ಕೇಂದ್ರಕ್ಕೆ ಭೂಮಿ ಪೂಜೆ ನೆರವೇರಿಸಿದರು.

ಸುಮಾರು ೯೧ ಕೋಟಿ ರೂಪಾಯಿ ವೆಚ್ಚದಲ್ಲಿ ಈ ಕೇಂದ್ರವನ್ನು ನಿರ್ಮಿಸಲಾಗುತ್ತಿದೆ. ಮಧ್ಯಪ್ರದೇಶ ಮತ್ತು ಸಮೀಪದ ರಾಜ್ಯಗಳ ಅಂಚೆ ನೌಕರರು, ಈ ಕೇಂದ್ರದಲ್ಲಿ ಸುಧಾರಿತ ತರಬೇತಿ ಪಡೆಯಲಿದ್ದಾರೆ. ಇದು ಅಂಚೆ ನೌಕರರ ಕೌಶಲ್ಯಗಳನ್ನು ಸುಧಾರಿಸಲು ಮತ್ತು ಅಂಚೆ ಸೇವೆಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ.

ಇದೇ ವೇಳೆ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು, ಶಿವಪುರಿಯಲ್ಲಿ ಆಧುನಿಕ ಮುಖ್ಯ ಅಂಚೆ ಕಚೇರಿ ಉದ್ಘಾಟಿಸಿದರು. ಅಂಚೆ ಕಚೇರಿ ಆಧುನೀಕರಣ ಯೋಜನೆಯಡಿ ಈ ಅಂಚೆ ಕಚೇರಿಯನ್ನು ಮೇಲ್ದರ್ಜೆಗೇರಿಸಲಾಗಿದೆ.

---

ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ, ಖಾಸಗಿ ಕಂಪನಿಯೊಂದಕ್ಕೆ ಕಡ್ಡಾಯ ಸುರಕ್ಷತಾ ಮುನ್ನೆಚ್ಚರಿಕೆಗಳಿಲ್ಲದೆ ಆನ್‌ಲೈನ್‌ನಲ್ಲಿ ಸ್ಫೋಟಕ ವಸ್ತುಗಳ ಪಟ್ಟಿ ಮತ್ತು ಮಾರಾಟಕ್ಕಾಗಿ ೧೦ ಲಕ್ಷ ರೂಪಾಯಿ ದಂಡ ವಿಧಿಸಿದೆ.

ಪರವಾನಗಿ ಪರಿಶೀಲನೆ, ಖರೀದಿದಾರರ ಅರ್ಹತಾ ಪರಿಶೀಲನೆಗಳು ಮತ್ತು ಕಡ್ಡಾಯ ಸುರಕ್ಷತಾ ಮುನ್ನೆಚ್ಚರಿಕೆಗಳಿಲ್ಲದೆ, ಅಮೋನಿಯಂ ನೈಟ್ರೇಟ್‌ನ ಆನ್‌ಲೈನ್ ಮಾರಾಟಕ್ಕಾಗಿ, ಕಂಪನಿಯು ಅನುಕೂಲ ಕಲ್ಪಿಸುತ್ತಿರುವುದು ಕಂಡುಬಂದಿದೆ.

ಸ್ಫೋಟಕ ಕಾಯ್ದೆ - ೧೮೮೪ ರ ಅಡಿಯಲ್ಲಿ ಅಮೋನಿಯಂ ನೈಟ್ರೇಟ್ ಅಥವಾ ಸ್ಫೋಟಕ ಎಂದು ವರ್ಗೀಕರಿಸಲಾದ ಯಾವುದೇ ವಸ್ತುವಿನ ಪಟ್ಟಿ, ಜಾಹೀರಾತು ಅಥವಾ ಮಾರಾಟವನ್ನು ಸುಗಮಗೊಳಿಸುವುದನ್ನು ಕಂಪನಿಯು ತಕ್ಷಣವೇ ನಿಲ್ಲಿಸುವಂತೆ ಪ್ರಾಧಿಕಾರ ನಿರ್ದೇಶಿಸಿದೆ.

---

ಕುವೈತ್‌ನಲ್ಲಿರುವ ಅಮೆರಿಕದ ಅಲಿ ಅಲ್-ಸಲೇಮ್ ಸೇನಾ ನೆಲೆಯ ಮೇಲೆ ದಾಳಿ ನಡೆಸಲಾಗಿದೆ ಎಂದು ಇರಾನ್ ಸೇನಾ ಪಡೆ ತಿಳಿಸಿದೆ.

ಜೋರ್ಡಾನ್‌ನಲ್ಲಿರುವ ಮಿಲಿಟರಿ ಶಿಬಿರ ಮತ್ತು ಇರಾಕ್‌ನಲ್ಲಿರುವ ನೆಲೆಯಲ್ಲಿ ಅಮೆರಿಕ ಕಣ್ಗಾವಲು ನಿಯಂತ್ರಣ ವ್ಯವಸ್ಥೆಯನ್ನು ನಾಶಪಡಿಸಲಾಗಿದೆ. ಕುವೈತ್‌ನಲ್ಲಿರುವ ಅಲಿ ಅಲ್-ಸಲೇಮ್ ಸೇನಾ ನೆಲೆಯ ಅಮೆರಿಕನ್ ಕಮಾಂಡರ್ ಅವರ ವಾಸಸ್ಥಳ ಮತ್ತು ಕಮಾಂಡ್ ಪೋಸ್ಟ್ ಅನ್ನು ಹೊಡೆದುರಳಿಸಲಾಗಿದೆ.

ಅಲಿ ಅಲ್-ಸಲೇಮ್ ನೆಲೆಯ ವಿರುದ್ಧದ ಕಾರ್ಯಾಚರಣೆಯ ಭಾಗವಾಗಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಈ ಪ್ರದೇಶದಾದ್ಯಂತ ಅಮೆರಿಕದ ಚಲನವಲನಗಳ ಬಗ್ಗೆ ಸಂಪೂರ್ಣ ಗುಪ್ತಚರ ಮಾಹಿತಿ ಹೊಂದಿದ್ದೇವೆ ಎಂದು ಇರಾನ್ ಸೇನಾ ಪಡೆ ಮಾಹಿತಿ ನೀಡಿದೆ.

ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮಾಯಿಲ್ ಬಕ್ಕೈ ಮಾತನಾಡಿ, ಸಿರಿಕ್‌ನಲ್ಲಿ ಮದುವೆ ನಡೆಯುತ್ತಿದ್ದ ಮನೆಯ ಮೇಲೆ ಅಮೆರಿಕ ನಡೆಸಿದ ದಾಳಿಯಲ್ಲಿ ೫೦ ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದ್ದಾರೆ.

---

ಅಮೆರಿಕ ಮತ್ತು ಇರಾನ್ ನಡುವೆ ಮತ್ತೆ ಸಂಘರ್ಷ ತೀವ್ರಗೊಂಡಿರುವ ಹಿನ್ನೆಲೆಯಲ್ಲಿ ಜಾಗತಿಕ ಕಚ್ಚಾ ತೈಲ ಬೆಲೆ ೫ ವಾರಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ. ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುವ ಆತಂಕದಿಂದ ತೈಲ ಬೆಲೆ ಹೆಚ್ಚಾಗಿದೆ.

ಹಾರ್ಮುಜ್ ಜಲಸಂಧಿ ಮತ್ತೆ ತೆರೆಯುವ ಸಾಧ್ಯತೆ ಕ್ಷೀಣಿಸಿರುವ ಹಿನ್ನೆಲೆಯಲ್ಲಿ, ನಿನ್ನೆ ಪ್ರತಿ ಬ್ಯಾರೆಲ್‌ಗೆ ತೈಲ ಬೆಲೆ ೪ ಡಾಲರ್‌ಗಿಂತಲೂ ಹೆಚ್ಚು ಏರಿಕೆಯಾಯಿತು.

ಇಂದು ಮಧ್ಯಂತರ ವಹಿವಾಟಿನಲ್ಲಿ ಕಚ್ಚಾ ತೈಲದ ಬೆಲೆ ಶೇಕಡ ೦.೨ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್‌ಗೆ ೯೪ ಡಾಲರ್ ೮೭ ಸೆಂಟ್ ತಲುಪಿದೆ.

---

ಪ್ರವಾಹ ಪೀಡಿತ ನೇಪಾಳಕ್ಕೆ ಪರಿಹಾರ ಮತ್ತು ರಕ್ಷಣಾ ನೆರವು ಹೊತ್ತ ಭಾರತದ ೫ನೇ ವಿಮಾನ ಇಂದು ಮಧ್ಯಾಹ್ನ ನೇಪಾಳ ತಲುಪಿದೆ.

ವಿಶೇಷ ಸುರಂಗ ರಕ್ಷಣಾ ಉಪಕರಣಗಳೊಂದಿಗೆ ೧೧ ಸದಸ್ಯರ ರಕ್ಷಣಾ ತಂಡ ಮತ್ತು ೫.೫ ಟನ್ ಅಗತ್ಯ ಔಷಧಗಳನ್ನು ವಿಮಾನದಲ್ಲಿ ಕಳುಹಿಸಲಾಗಿದೆ.

ನೇಪಾಳದಲ್ಲಿ ನಡೆಯುತ್ತಿರುವ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳಿಗೆ ಭಾರತ ಎಲ್ಲ ರೀತಿಯ ನೆರವನ್ನು ಮುಂದುವರಿಸಿದೆ ಎಂದು ನೇಪಾಳದಲ್ಲಿರುವ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ.

---

ಭಾರತದ ಶಟ್ಲರ್‌ಗಳಾದ ಕಿದಂಬಿ ಶ್ರೀಕಾಂತ್ ಮತ್ತು ತನ್ವಿ ಶರ್ಮಾ ಇಂದು ಚೀನಾ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಎರಡನೇ ಸುತ್ತಿಗೆ ಮುನ್ನಡೆದರು.

ಶೆನ್ಜೆನ್‌ನಲ್ಲಿ ನಡೆದ ಪುರುಷರ ಸಿಂಗಲ್ಸ್‌ನ ಆರಂಭಿಕ ಪಂದ್ಯದಲ್ಲಿ ಶ್ರೀಕಾಂತ್, ಚೈನೀಸ್ ತೈಪೆಯ ಚಿ ಯು ಜೆನ್ ಅವರನ್ನು ೨೧-೧೯ ೨೧-೧೫ ಅಂತರದಿಂದ ಸೋಲಿಸಿದರು.

ಮತ್ತೊಂದು ಪುರುಷರ ಸಿಂಗಲ್ಸ್ ಪಂದ್ಯದಲ್ಲಿ ಲಕ್ಷ್ಯ ಸೇನ್, ಕೆನಡಾದ ವಿಕ್ಟರ್ ಲೈ ವಿರುದ್ಧ ೧೪-೨೧ ೭-೨೧ ಅಂತರದಿಂದ ಸೋತ ನಂತರ ಪಂದ್ಯಾವಳಿಯಿಂದ ಹೊರಬಿದ್ದರು.

ಮಹಿಳಾ ಸಿಂಗಲ್ಸ್‌ನ ಮೊದಲ ಸುತ್ತಿನ ಪಂದ್ಯದಲ್ಲಿ, ಭಾರತದ ತನ್ವಿ ಶರ್ಮಾ, ಡೆನ್ಮಾರ್ಕ್‌ನ ಅಮಾಲಿ ಶುಲ್ಜ್ ಅವರನ್ನು ೨೧-೧೯, ೨೧-೧೭ ನೇರ ಸೆಟ್‌ಗಳಿಂದ ಪರಾಭವಗೊಳಿಸಿದರು.

ಇದೇ ವೇಳೆ, ಭಾರತದ ದೇವಿಕಾ ಸಹಗ್, ಬಲ್ಗೇರಿಯಾದ ಕಲೋಯನಾ ನಲಬಂಟೋವಾ ವಿರುದ್ಧ ೧೮-೨೧, ೧೫-೨೧ ಅಂತರದಿಂದ ಸೋತರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿಯು, ಥೈಲ್ಯಾಂಡ್‌ನ ಟೊನ್ನಕಾರ್ನ್ ಸಾಹೆಂಗ್ ಮತ್ತು ಟೊನ್ನಿಚಾ ಸಾಹೆಂಗ್ ಅವರನ್ನು ೨೧-೮, ೨೧-೯ ಅಂತರದಿಂದ ಸೋಲಿಸಿ, ಮುಂದಿನ ಸುತ್ತಿಗೆ ಪಡೆದಿದ್ದಾರೆ.

__________ ಮುಕ್ತಾಯ __________